# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಶಿವರಾಮ ಗಾಂವಕರ್, ಅಂದಿನ ಶಾಖಾಧಿಕಾರಿ, ಯೋಜನಾ ಉಪ ವಿಭಾಗ, ಕಾರವಾರ ಹಾಗೂ ಶ್ರೀ ಡಿ.ಹೆಚ್.ಚಂದ್ರಪ್ಪ, ಅಂದಿನ ಸಹಾಯಕ ಇಂಜಿನಿಯರ್, ಯೋಜನಾ ವಿಭಾಗ, ಕಾರವಾರ ಇವರುಗಳ ವಿರುದ್ಧದ ಆರೋಪಗಳ ಕುರಿತು ಇಲಾಖಾ ವಿಚಾರಣೆ, ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸುವ ಬಗ್ಗೆ, ಆದೇಶ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 94 ಇಎನ್ ಕ್ಯೂ 2014 ದಿನಾಂಕ: 28.11.2014
2. ಅಪರ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಇಲಾಖಾ ವಿಚಾರಣೆ ವರದಿ ಸಂಖ್ಯೆ: LOK/INQ/14A/631 /2014/ARE-11, ದಿನಾಂಕ: 12.06.2019
3. ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು ವರದಿ ಸಂಖ್ಯೆ: LOK/INQ/14A/631/2014/ARE-11, ದಿನಾಂಕ: 17.06.2019
4. ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ 51 ಇಎನ್ ಕ್ಯೂ 2019 ದಿನಾಂಕ: 11.07.2019
5. ಶ್ರೀ ಶಿವರಾಮ ಗಾಂವಕರ್ ಮತ್ತು ಶ್ರೀ ಡಿ.ಹೆಚ್.ಚಂದ್ರಪ್ಪ ಇವರ ಲಿಖಿತ ವಿವರಣೆ ಕ್ರಮವಾಗಿ ದಿನಾಂಕ: 06.12.2019 ಮತ್ತು 13.11.2019

*****

**ಪ್ರಸ್ತಾವನೆ:**

ಶ್ರೀ ಚಂದ್ರಕಾಂತ ಶಿವು ಮರಾಠಿ, ಸಂಪೊಳ್ಳಿ, ಹೊನ್ನಾವರ ತಾಲ್ಲೂಕು ಮತ್ತು ಶ್ರೀ ಶಂಕರ್ ಗೋವಿಂದಗೌಡ ಇವರುಗಳು ಲೋಕಾಯುಕ್ತ ಕಚೇರಿಯಲ್ಲಿ ಹೊನ್ನಾವರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮುಂಡಾರ್ ಗ್ರಾಮದಿಂದ ಸಂಪೊಳ್ಳಿ ನಡುವಿನ 4.74 ಕಿ.ಮೀ., ದೂರದ ರಸ್ತೆಯನ್ನು ಹಾಗೂ ರಾಷ್ಟ್ರೀಯ ಹೆದ್ದಾರಿ 17 ರಿಂದ ಕೋಟಾ ಗ್ರಾಮದವರೆಗಿನ 3.5 ಕಿ.ಮೀ. ರಸ್ತೆ ಅಭಿವೃದ್ಧಿಯನ್ನು 82.45 ಲಕ್ಷ ರೂ.ಗಳ ವೆಚ್ಚದಲ್ಲಿ ಕೈಗೊಂಡಿದ್ದು, ಈ ಎರಡೂ ರಸ್ತೆ ಕಾಮಗಾರಿಗಳು ಅಭಿವೃದ್ಧಿಯ ನಂತರವು ಸರ್ವಋತು ರಸ್ತೆಯಿಂದ ಸಂಪರ್ಕ ಹೊಂದದೆ ಇರುವುದರಿಂದ ಈ ಎರಡೂ ಕಾಮಗಾರಿಗಳಿಗೆ ಮಾಡಲಾದ ಒಟ್ಟಾರೆ ವೆಚ್ಚವು ನಿರರ್ಥಕ ವೆಚ್ಚವೆಂದು ಸಲ್ಲಿಸಿದ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಚೇರಿಯು ತನಿಖೆ ನಡೆಸಿ ಲೋಕಾಯುಕ್ತ ಕಾಯ್ದೆ ಕಲಂ 12(3)ರ ಅನುಸಾರ ಸಲ್ಲಿಸಿದ್ದ ವರದಿಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡ ಆಪಾದಿತ ಅಧಿಕಾರಿ / ನೌಕರರುಗಳ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಕಂಡುಬಂದ ಹಿನ್ನೆಲೆಯಲ್ಲಿ ಸದರಿಯವರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸಲು ಸದರಿ ನಿಯಮಗಳ ನಿಯಮ 14(ಎ) ರನ್ವಯ ಪ್ರಕರಣವನ್ನು ಮೇಲೆ ಕ್ರಮ ಸಂಖ್ಯೆ: ಗ್ರಾಅಪ 94 ಇಎನ್ ಕ್ಯೂ 2014 ದಿನಾಂಕ: 28.11.2014ರಲ್ಲಿ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲಾಗಿತ್ತು:-

1. ಶ್ರೀ ಸುವಿಂಧರಸಿಂಗ್ ಮಥಾಡು, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಕಾರವಾರ.
2. ಶ್ರೀ ಕೆ.ಜಿ.ಹಿರೇಮಠ, ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ)

3. ಶಿವರಾಮ ಗಾಂವಕರ್, ಅಂದಿನ ಶಾಖಾಧಿಕಾರಿ, ಯೋಜನಾ ಉಪ ವಿಭಾಗ, ಕಾರವಾರ
4. ಡಿ.ಹೆಚ್. ಚಂದ್ರಪ್ಪ, ಅಂದಿನ ಸಹಾಯಕ ಇಂಜಿನಿಯರ್, ಯೋಜನಾ ವಿಭಾಗ, ಕಾರವಾರ
5. ಶ್ರೀ ವಿ.ವಿ.ತೇಲಂಗಿ, ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಕಾರವಾರ.

ಸದರಿ ಆದೇಶದ ಅನುಸಾರ ಮಾನ್ಯ ಉಪ ಲೋಕಾಯುಕ್ತರವರು ಅಪರ ನಿಬಂಧಕರು-11 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಯವರು ಆಪಾದಿತರ ವಿರುದ್ಧದ ಆರೋಪಗಳ ಬಗ್ಗೆ ವಿವರವಾಗಿ ವಿಚಾರಣೆ ನಡೆಸಿ ವರದಿಯನ್ನು ಮಾನ್ಯ ಉಪ ಲೋಕಾಯುಕ್ತ-1 ರವರಿಗೆ ದಿನಾಂಕ: 12.06.2019 ರಂದು ಸಲ್ಲಿಸಿದ್ದು, ಮಾನ್ಯ ಉಪ ಲೋಕಾಯುಕ್ತ-1 ರವರು ವಿಚಾರಣಾ ವರದಿಯನ್ನು ಪರಿಶೀಲಿಸಿ, ಇಲಾಖಾ ವಿಚಾರಣೆಯನ್ನು ಸಮರ್ಪಕವಾಗಿ ನಡೆಸಿರುವುದರಿಂದ ವಿಚಾರಣಾ ವರದಿಗೆ ಸಹಮತಿಸಿ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆಯನ್ನು ವಿಧಿಸಲು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ: 17.06.2019ರ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಪ್ರಕರಣದಲ್ಲಿ ಭಾಗಿಯಾಗಿರುವ ಮೇಲ್ಕಂಡ 5 ಆಪಾದಿತರುಗಳ ಪೈಕಿ ಈ ಕೆಳಕಂಡ ಮೂವರು ಆಪಾದಿತರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಕಾರಣ ಅವರುಗಳಿಗೆ ದಂಡನೆ ವಿಧಿಸಲು ಪ್ರಸ್ತಾವನೆಯನ್ನು ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ದಿ:13-03-2020ರಂದು ಕಳುಹಿಸಲಾಗಿದೆ.

1. ಶ್ರೀ ಸುವಿಂಧರಸಿಂಗ್ ಮಥಾಡು, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಕಾರವಾರ.
2. ಶ್ರೀ ಕೆ.ಜಿ.ಹಿರೇಮಠ, ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ)
3. ಶ್ರೀ ವಿ.ವಿ.ತೇಲಂಗಿ, ಹಿಂದಿನ ಪ್ರಭಾರಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಕಾರವಾರ.

ಇನ್ನುಳಿದಂತೆ ಸೇವೆಯಲ್ಲಿರುವ ಶ್ರೀ (1) ಶಿವರಾಮ ಗಾಂವಕರ್ ಹಾಗೂ (2) ಡಿ.ಹೆಚ್. ಚಂದ್ರಪ್ಪ ಇವರುಗಳ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವುದರಿಂದ ವಿಚಾರಣಾ ವರದಿಯನ್ನು ಆಧರಿಸಿ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸದರಿಯವರಿಗೆ ಮಾನ್ಯ ಉಪ ಲೋಕಾಯುಕ್ತ-1 ರವರ ಶಿಫಾರಸ್ಸು ಹಾಗೂ ವಿಚಾರಣಾ ವರದಿಯ ಪ್ರತಿಯನ್ನು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ: 11.07.2019 ರಂದು 2ನೇ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸುವಂತೆ ತಿಳಿಸಲಾಗಿತ್ತು.

ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರ ವಿರುದ್ಧ ಹೊನ್ನಾವರ ತಾಲ್ಲೂಕಿನ ವ್ಯಾಪ್ತಿಯಲ್ಲಿ T-04 (NH 17) ರಿಂದ ಸಂಪೊಳ್ಳಿಯವರೆಗೆ ಮುಂಡಾರು ಗ್ರಾಮದವರೆಗೆ 4.74 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಅನುಮೋದನೆಯಾಗಿರುತ್ತದೆ. ಆದರೆ, 4.74 ಕಿ.ಮೀ. ರಸ್ತೆಯ ಅಂದಾಜು ತಯಾರಿಸುವ ಕೆಲಸವನ್ನು M/s. Felix Soft Solution, Bangalore, ಇವರಿಗೆ ವಹಿಸಲಾಗಿರುತ್ತದೆ. ಆದರೆ, ಸದರಿಯವರು ಸಂಪೊಳ್ಳಿ ಗ್ರಾಮದಿಂದ ಮುಂಡಾರು ಗ್ರಾಮದವರೆಗೆ ರಸ್ತೆ ಅಭಿವೃದ್ಧಿ ಪಡಿಸಲು ಅಂದಾಜನ್ನು ತಯಾರಿಸದೆ T-04 ರಿಂದ ಕೋಟಾವರೆಗೆ 3.60 ಕಿ.ಮೀ.ಗಳ ರಸ್ತೆ ಅಭಿವೃದ್ಧಿ ಪಡಿಸಲು ಅಂದಾಜು ಪಟ್ಟಿ ತಯಾರಿಸಿರುತ್ತಾರೆ. ಈ ಅಂಶವನ್ನು ಹಣ ಪಾವತಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿರುವುದಿಲ್ಲ. ಅಲ್ಲದೇ, ರಸ್ತೆ ಅಭಿವೃದ್ಧಿ ಪಡಿಸಿದ ಅಧಿಕಾರಿಗಳು ಸಹ ಕಾಮಗಾರಿಗಾಗಿ ವೆಚ್ಚ ಮಾಡಿರುವ 82.45 ಲಕ್ಷ ರೂ.ಗಳ ಸಾರ್ಥಕತೆ ಬಗ್ಗೆ ಪರಿಶೀಲಿಸದೆ ಕಾಮಗಾರಿಯನ್ನು ಅನುಷ್ಠಾನಗೊಳಿಸಿ M/s. Felix Soft Solution, Bangalore, ಇವರಿಗೆ ಪಾವತಿಸಿದ ವೆಚ್ಚ

ಮತ್ತು ಕಾಮಗಾರಿಗಾಗಿ ಮಾಡಿದ ಅನುದಾನದ ವೆಚ್ಚಕ್ಕೆ ಸಂಪೂರ್ಣವಾಗಿ ಜವಾಬ್ದಾರರೆಂದು ಆರೋಪಿಸಲಾಗಿದೆ. ಸದರಿ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರವಾಗಿ 2 ಸಾಕ್ಷಿದಾರರು ಹಾಗೂ ಹಲವಾರು ದಾಖಲೆಗಳು ಮತ್ತು ಆಪಾದಿತರ ಪರವಾಗಿ ಹಾಜರು ಪಡಿಸಿದ ದಾಖಲೆಗಳನ್ನು ಪರಿಗಣಿಸಿ ಆರೋಪಗಳ ಕುರಿತು ನಿರ್ಣಯಿಸಿರುತ್ತಾರೆ.

ವಿಚಾರಣಾ ವರದಿಗೆ ಪ್ರತಿಯಾಗಿ ಶ್ರೀ ಶಿವರಾಮ ಗಾಂವಕರ್, ಅಂದಿನ ಶಾಖಾಧಿಕಾರಿ, ಯೋಜನಾ ಉಪವಿಭಾಗ ಹಾಗೂ ಶ್ರೀ ಬಿ.ಹೆಚ್. ಚಂದ್ರಪ್ಪ, ಸಹಾಯಕ ಇಂಜಿನಿಯರ್ ಇವರುಗಳು ತಮ್ಮ ಲಿಖಿತ ವಿವರಣೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ಸಾಕ್ಷಿಗಳ ಹೇಳಿಕೆಗಳು, ಆಪಾದಿತರು ಸಲ್ಲಿಸಿರುವ ಲಿಖಿತ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲಿಸಿರುತ್ತದೆ.

ಸದರಿ ಆರೋಪಕ್ಕೆ ಸಂಬಂಧಿಸಿದಂತೆ ಶ್ರೀ ಶಿವರಾಮ ಗಾಂವಕರ್ ಇವರು ತಮ್ಮ ವಿವರಣೆಯಲ್ಲಿ ಅಂದಿನ ಶಾಸಕರು ಆಯ್ಕೆ ಮಾಡಿದ ಅನುಸಾರ ರಸ್ತೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಈ ಸಂಬಂಧ ದಾಖಲಾಗಿರುವ ದೂರು ಆಧಾರ ರಹಿತವಾಗಿದೆಯೆಂದು ಪ್ರಾರಂಭದಲ್ಲಿ 10 ಕಿ.ಮೀ. ರಸ್ತೆ ಅಭಿವೃದ್ಧಿ ಪಡಿಸಲು ಪ್ರಸ್ತಾವನೆ ಸಲ್ಲಿಸಿದ್ದರೂ ಸಹ ಅನುದಾನದ ಕೊರತೆಯಿಂದ 4.74 ಕಿ.ಮೀ. ರಸ್ತೆ ಅಭಿವೃದ್ಧಿ ಪಡಿಸಲಾಗಿದ್ದು, ಮೂಲ ಅಂದಾಜಿನ ಅನುಸಾರ ಕ್ರಮ ವಹಿಸಲಾಗಿದೆಯೆಂದು ಸದರಿ ರಸ್ತೆ ಕಾಮಗಾರಿಯನ್ನು ಜಿಲ್ಲಾ ಗುಣ ನಿಯಂತ್ರಣ ಮಾನಿಟರ್ ರವರು ತಪಾಸಣೆ ನಡೆಸಿರುತ್ತಾರೆಂದು ತಿಳಿಸಿ ತಮ್ಮ ವಿರುದ್ಧದ ಆರೋಪವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಪ್ರಕರಣದ ಇನ್ನೊಬ್ಬ ಆಪಾದಿತರಾದ ಶ್ರೀ ಡಿ.ಹೆಚ್. ಚಂದ್ರಪ್ಪ ಇವರು ವಿಚಾರಣಾ ವರದಿಗೆ ಪ್ರತಿಯಾಗಿ ಸಲ್ಲಿಸಿರುವ ಹೇಳಿಕೆಯಲ್ಲಿ ಅಂದಾಜು ಪತ್ರಿಕೆ ತಯಾರಿಸಿದ M/s. Felix Soft Solution, Bangalore ರವರಿಗೆ ಪಾವತಿಸಿದ 99,336/-ಗಳನ್ನು ಈಗಾಗಲೇ ಕಾಮಗಾರಿಯ ಬಿಲ್ಲುಗಳ ಪಾವತಿಯಲ್ಲಿ ಕಡಿತ ಮಾಡಿರುವುದಾಗಿ ಯೋಜನಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರು ವರದಿ ಮಾಡಿದ್ದು, ತಮ್ಮಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ ತಮ್ಮಿಂದ ಯಾವುದೇ ಹಣ ವಸೂಲಿ ಮಾಡಬಾರದೆಂದು ಕೋರಿರುತ್ತಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಎಲ್ಲಾ ದಾಖಲೆ ಹಾಗೂ ಮಾಹಿತಿಯನ್ನು ಪರಿಶೀಲಿಸಿದ ನಂತರ ಕಂಡುಬರುವ ಪ್ರಮುಖ ಅಂಶವೆಂದರೆ, M/s. Felix Soft Solution, Bangalore ಇವರು ಉತ್ತರ ಕನ್ನಡ ಜಿಲ್ಲೆಯ ರಸ್ತೆಗಳ Core Network ಅನುಸಾರ ವಿವರವಾದ ಯೋಜನಾ ವರದಿ ತಯಾರಿಸದೆ T-04 (NH 17) ರಿಂದ ಸಂಪೊಳ್ಳಿಯವರೆಗೆ 4.74 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಅಂದಾಜು ತಯಾರಿಸಿರುತ್ತಾರೆ. ಅದರಂತೆ, ಅಂದಾಜು ಪಟ್ಟಿಯು ಸಹ ಸಮಗ್ರ ಪರಿಶೀಲನೆಗೆ ಒಳಪಡದೇ ಅನುಮೋದನೆಯಾಗಿರುತ್ತದೆ. ಅಂದಾಜು ಪಟ್ಟಿಯ ಅನುಸಾರ ಸದರಿ ಕಾಮಗಾರಿಗಾಗಿ ಒಟ್ಟಾರೆ 82.45 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿರುತ್ತದೆ. ಅಲ್ಲದೇ, ಸದರಿ ಅಂದಾಜು ತಯಾರಿಸಲು 99,336/- ರೂ.ಗಳ ವೆಚ್ಚವಾಗಿದೆ. ವಾಸ್ತವವಾಗಿ T-04 ರಿಂದ ಸಂಪೊಳ್ಳಿ ವರೆಗೆ 10 ಕಿ.ಮೀ.ಗಳ ದೂರವಿರುತ್ತದೆ. ಆದರೆ, 3.60 ಕಿ.ಮೀ.ರಸ್ತೆ ಅಭಿವೃದ್ಧಿ ಪಡಿಸಿದ ನಂತರ ಸಂಪೊಳ್ಳಿ ಗ್ರಾಮದ ನಡುವೆ 6 ಕಿ.ಮೀ.ಗೂ ಹೆಚ್ಚು ಅಂತರವಿದ್ದು, ಈ ಸ್ಥಳದಲ್ಲಿ ದಟ್ಟ ಅರಣ್ಯವಿರುತ್ತದೆ. ಇಲಾಖಾ ವಿಚಾರಣೆಯಲ್ಲಿ ಪರಿಗಣಿಸಲಾಗಿರುವ ಮುಖ್ಯ ಇಂಜಿನಿಯರ್, ಕರ್ನಾಟಕ ಲೋಕಾಯುಕ್ತ ಇವರ ದಿನಾಂಕ:08.03.2013ರ ವರದಿಯ ಅನುಸಾರ 3.6 ಕಿ.ಮೀ. ರಸ್ತೆ ಕ್ರಮಿಸಿದ ನಂತರ ಕಾಲುಜಾಡು ಸಹ ಸ್ಪಷ್ಟವಾಗಿ ಕಂಡು ಬರುವುದಿಲ್ಲವೆಂದು ನಂತರದ ಭಾಗದಲ್ಲಿ ಯಾವುದೇ ರಸ್ತೆ ಕಾಲುಜಾಡು ಇಲ್ಲದೇ ಇರುವುದರಿಂದ 3.6 ಕಿ.ಮೀ. ರಸ್ತೆ ನಿರ್ಮಿಸಿ 82.45 ಲಕ್ಷ ರೂ.ಗಳ ವೆಚ್ಚವು ನಿರರ್ಥಕವಾಗಿದೆ ಎಂಬುದು ಸತ್ಯವಾಗಿರುತ್ತದೆ ಎಂಬುದು ಕಂಡುಬಂದಿರುತ್ತದೆ.

ವಾಸ್ತವವಾಗಿ ಅಂದಾಜು (ಡಿ.ಪಿ.ಆರ್.) ತಯಾರಿಸುವ ಸಂದರ್ಭದಲ್ಲಿ T-04 ರಿಂದ ಸಂಪೋಳ್ಳಿ ಗ್ರಾಮದವರೆಗೆ ರಸ್ತೆ ಕಾಮಗಾರಿ ನಿರ್ಮಿಸಿರುವ ಕುರಿತು ನಮೂದಿಸಲಾಗಿದ್ದರು ಸಹ ಅಭಿವೃದ್ಧಿ ಪಡಿಸಿದ ರಸ್ತೆಯು ಸಂಪೊಳ್ಳಿ ಗ್ರಾಮವನ್ನು ಸಂಪರ್ಕಿಸುವುದಿಲ್ಲ. ಅಲ್ಲದೇ, ರಸ್ತೆ ಅಭಿವೃದ್ಧಿಪಡಿಸಿದ ನಂತರ 6 ಕಿ.ಮೀ.ಗೂ ಹೆಚ್ಚು ದಟ್ಟ ಅರಣ್ಯ ಪ್ರದೇಶವಿದ್ದು ಈ ಜಾಗದಲ್ಲಿ ಕಾಲುಜಾಡು ಸಹ ಇಲ್ಲದಿರುವುದರಿಂದ ಇದೊಂದು ನಿರರ್ಥಕವಾದ ಕಾಮಗಾರಿಯಾಗಿರುತ್ತದೆ. ಶ್ರೀ ಬಿ.ಹೆಚ್. ಚಂದ್ರಪ್ಪ, ಆಪಾದಿತ ಅಧಿಕಾರಿ ಇವರು ಆ ಸಂದರ್ಭದಲ್ಲಿ ಅಂದಾಜು ಪತ್ರಿಕೆ ತಯಾರಿಕೆಯ ಜವಾಬ್ದಾರಿ ಹೊಂದಿದ್ದು, ಅಂದಾಜು ಪತ್ರಿಕೆಯನ್ನು Core Network ನಲ್ಲಿ ಅನುಮೋದನೆ ಯಾಗಿರುವಂತೆ ತಯಾರಿಸಲಾಗಿದೆಯೇ ಅಥವಾ ಇಲ್ಲವೇ ಎಂದು ಪರಿಶೀಲಿಸದೇ ಅಥವಾ ವಾಸ್ತವವಾಗಿ ತಯಾರಿಸಿರುವ ಅಂದಾಜು ಪಟ್ಟಿಯು ವಾಸ್ತವವಾಗಿದೆಯೇ ಎಂಬುದನ್ನು ಪರಿಶೀಲಿಸದೇ ಹಣ ಪಾವತಿಸಲು ಕಾರಣರಾಗಿದ್ದು, ಇವರ ವಿರುದ್ಧದ ಆರೋಪವು ಸಹ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುತ್ತದೆ.

ರಸ್ತೆ ಕಾಮಗಾರಿಯನ್ನು ಅಭಿವೃದ್ಧಿ ಪಡಿಸಿದ ಆಪಾದಿತ ಅಧಿಕಾರಿಗಳು ವಾಸ್ತವವಾಗಿ Core Network ನಲ್ಲಿ ಸೇರ್ಪಡೆಯಾಗಿರುವ ರಸ್ತೆ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ ಇಲ್ಲವೇ ಎಂಬುದನ್ನು ಪ್ರಪ್ರಥಮವಾಗಿ ಪರಿಶೀಲಿಸಿರುವುದಿಲ್ಲ. ಅಲ್ಲದೇ, ಕಾಮಗಾರಿ ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ರಸ್ತೆ ಅಭಿವೃದ್ಧಿ ಪಡಿಸಿದ ನಂತರ ಅದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆಯೇ ಇಲ್ಲವೇ ಎಂಬ ಮೂಲ ಉದ್ದೇಶವನ್ನು ಗಮನಿಸದೇ ತೀವ್ರ ನಿರ್ಲಕ್ಷತೆಯಿಂದ ಕಾಮಗಾರಿ ಅನುಷ್ಠಾನಗೊಳಿಸಿ ಗುತ್ತಿಗೆದಾರರಿಗೆ ಹಣ ಪಾವತಿಸಿರುತ್ತಾರೆ. ಆಪಾದಿತರು ಎಸಗಿರುವ ತೀವ್ರ ಸ್ವರೂಪದ ಕರ್ತವ್ಯ ಲೋಪ ಮತ್ತು ಸರ್ಕಾರದ ಹಣ ನಿರರ್ಥಕವಾಗಿರುವುದನ್ನು ಮರೆಮಾಚುವ ದೃಷ್ಟಿಯಿಂದ ಅಂದಿನ ವಿಧಾನ ಸಭಾ ಕ್ಷೇತ್ರದ ಶಾಸಕರು ಪತ್ರ ನೀಡಿರುವುದನ್ನು ಉಲ್ಲೇಖಿಸಿ ರಕ್ಷಣೆ ಪಡೆದುಕೊಳ್ಳಲು ಪ್ರಯತ್ನಿಸಿರುತ್ತಾರೆ. ಸದರಿ ಪತ್ರವನ್ನು ಇಲಾಖಾ ವಿಚಾರಣೆ ಸಂದರ್ಭದಲ್ಲಿ ಪ್ರದರ್ಶಿತ ದಾಖಲೆ ಪಿ-04 ಎಂದು ಪರಿಗಣಿಸಿದ್ದು, ಮಾನ್ಯ ಶಾಸಕರು ರಾಷ್ಟ್ರೀಯ ಹೆದ್ದಾರಿ 17 ರಿಂದ ಸಂಪೋಳ್ಳಿವರೆಗೆ ರಸ್ತೆ ಅಬಿವೃದ್ಧಿಪಡಿಸಿ ಸಾರ್ವಜನಿಕರ ಬೇಡಿಕೆಯನ್ನು ಈಡೇರಿಸುವಂತೆ ಕೋರಿರುತ್ತಾರೆ. ಆದರೆ, ರಸ್ತೆ ಕಾಮಗಾರಿಯು ದಟ್ಟ ಅರಣ್ಯದಲ್ಲಿ ಪೂರ್ಣಗೊಂಡಿದ್ದು, ನಂತರದಲ್ಲಿ ಯಾವುದೇ ರಸ್ತೆ, ಕಾಲುಜಾಡು ಇರುವುದಿಲ್ಲ. ಹೀಗಾಗಿ, ಸದರಿ ರಸ್ತೆ ಅಭಿವೃದ್ಧಿಯಿಂದ ಸಾರ್ವಜನಿಕರಿಗೆ ಯಾವ ಅನುಕೂಲವಾಗಿದೆಯೆಂದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಒಂದು ವೇಳೆ ಶಾಸಕರ ಕೋರಿಕೆಯನ್ನು ಪರಿಗಣಿಸಿ ರಸ್ತೆ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಂಡಿದ್ದಲ್ಲಿ, ಆಪಾದಿತರುಗಳು ಸದರಿ ಕಾಮಗಾರಿಗೆ ಸಿಮೀತವಾಗಿ ಅಂದಾಜು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳಲು ಕ್ರಮವಹಿಸಬೇಕಾಗುತ್ತದೆ. ಆದರೆ, ಈ ದಿಸೆಯಲ್ಲಿ ಆಪಾದಿತರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಹಾಗಾಗಿ ಆಪಾದಿತರ ವಿರುದ್ಧದ ಆರೋಪವು ಇಲಾಖಾ ವಿಚಾರಣೆಯಲ್ಲಿ ಸ್ಪಷ್ಟವಾಗಿ ಸಾಬೀತಾಗಿರುತ್ತದೆ. ಸದರಿ ಆಪಾದಿತರು ಸಲ್ಲಿಸಿರುವ ವಿವರಣೆಯನ್ನು ಪರಿಗಣಿಸಲು ಸಮರ್ಥನೀಯವಾದ ಕಾರಣಗಳು ಹಾಗೂ ಯಾವುದೇ ಪರಿಗಣನಾರ್ಹವಾದ ಅಂಶಗಳು ಕಂಡು ಬರುವುದಿಲ್ಲ. ಹಾಗಾಗಿ ಆಪಾದಿತರಾದ ಶ್ರೀ ಶಿವರಾಮ ಗಾಂವಕರ್ ಹಾಗೂ ಶ್ರೀ ಡಿ.ಹೆಚ್. ಚಂದ್ರಪ್ಪ ಇವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತೀವ್ರ ಸ್ವರೂಪದ ಕರ್ತವ್ಯ ನಿರ್ಲಕ್ಷತೆ ತೋರಿರುವುದರಿಂದ ಸರ್ಕಾರದ ಬೃಹತ್ ಅನುದಾನವು ನಿರರ್ಥಕವಾಗಿರುತ್ತದೆ.

ಆದ್ದರಿಂದ ಸದರಿಯವರುಗಳ ವಿರುದ್ಧ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಅವರುಗಳಿಗೆ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ. -

**ಆದೇಶ ಸಂಖ್ಯೆ: ಗ್ರಾಅಪ 51 ಇಎನ್ ಕ್ಯೂ 2019, ಬೆಂಗಳೂರು ದಿನಾಂಕ:25.06.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡ ಆಪಾದಿತ ಅಧಿಕಾರಿ / ನೌಕರರ ವಿರುದ್ಧ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಅವರ ಹೆಸರಿನ ಮುಂದೆ ನಮೂದಿಸಿರುವಂತೆ ದಂಡನೆಯನ್ನು ವಿಧಿಸಿ ಆದೇಶಿಸಿದೆ:-

| ಕ್ರ. ಸಂ. | ಆಪಾದಿತ ಅಧಿಕಾರಿಯ ಹೆಸರು | ವಿಧಿಸಲಾದ ದಂಡನೆ |
|---|---|---|
| 1. | ಶ್ರೀ ಶಿವರಾಮ ಗಾಂವಕರ್, ಅಂದಿನ ಶಾಖಾಧಿಕಾರಿ, ಯೋಜನಾ ಉಪ ವಿಭಾಗ, ಕಾರವಾರ | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8 (iv) ರ ಅನುಸಾರ ಸದರಿಯವರಿಂದ ರೂ. 20,94,362/- (ಇಪ್ಪತ್ತು ಲಕ್ಷ ತೊಂಬತ್ತ ನಾಲ್ಕು ಸಾವಿರದ ಮೂರು ನೂರ ಅರವತ್ತೆರಡು ರೂಪಾಯಿಗಳು) ಗಳನ್ನು ಅವರ ವೇತನ ಮತ್ತು ಭತ್ಯೆಗಳಿಂದ ವಸೂಲು ಮಾಡುವುದು. ಬಾಕಿ ಮೊತ್ತವನ್ನು ಅವರ ನಿವೃತ್ತಿ ವೇತನ ಮತ್ತು ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವುದು.<br>ಜೊತೆಗೆ ಸದರಿ ನಿಯಮಗಳ ನಿಯಮ 8(iv)(ಎ)ರ ಅನುಸಾರ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ಹಂತಗಳನ್ನು ದಿನಾಂಕ:30.04.2022ರ ವರೆಗೆ ಕೆಳಗಿಳಿಸುವುದು. ಈ ಅವಧಿಯಲ್ಲಿ ಅವರು ಯಾವುದೇ ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯಲು ಅರ್ಹರಿರುವುದಿಲ್ಲ. ದಂಡನಾ ಅವಧಿ ಪೂರ್ಣಗೊಂಡ ನಂತರ ಮೂಲ ವೇತನವನ್ನು ದಂಡನೆ ವಿಧಿಸಿದ ದಿನಾಂಕದಲ್ಲಿದ್ದಂತೆ ಮರು ನಿಗಧಿಪಡಿಸುವುದು. |
| 2. | ಶ್ರೀ ಡಿ.ಹೆಚ್. ಚಂದ್ರಪ್ಪ, ಅಂದಿನ ಸಹಾಯಕ ಇಂಜಿನಿಯರ್, ಯೋಜನಾ ವಿಭಾಗ, ಕಾರವಾರ | ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8 (iv) ರ ಅನುಸಾರ ಸದರಿಯವರಿಂದ 33,112/- ರೂ.ಗಳನ್ನು (ಮೂವತ್ತ ಮೂರ ನೂರ ಹನ್ನೆರಡು ರೂಪಾಯಿಗಳು ಮಾತ್ರ) ಅವರ ವೇತನ ಮತ್ತು ಭತ್ಯೆಗಳಿಂದ ವಸೂಲು ಮಾಡುವುದು ಹಾಗೂ ಸದರಿ ನಿಯಮಗಳ ನಿಯಮ 8(iii)ರ ಅನುಸಾರ ಅವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಹೊಂದುವಂತೆ ತಡೆಹಿಡಿಯುವುದು. |

ಮೇಲ್ಕಂಡಂತೆ ಆರೋಪಿತರಿಗೆ ವಿಧಿಸಲಾದ ದಂಡನೆಯನ್ನು ಜಾರಿಗೊಳಿಸಲು ಕ್ರಮ ತೆಗೆದುಕೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶರಣಬಸಪ್ಪ.ಎಂ) 25/6/2010
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
25/6/2010

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಜಲಸಾರಿಗೆ ಇಲಾಖೆ
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರ.
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
7. ಅಪರ ನಿಬಂಧಕರು ವಿಚಾರಣೆಗಳು – 11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
8. ಸಂಬಂಧಪಟ್ಟ ಆಪಾದಿತ ಅಧಿಕಾರಿಗಳಿಗೆ - ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಉತ್ತರ ಕನ್ನಡ ಜಿಲ್ಲಾ ಪಂಚಾಯತ್, ಕಾರವಾರ ಇವರ ಮುಖಾಂತರ.
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು / ವಿಶೇಷ ಕರ್ತವ್ಯಾಧಿಕಾರಿಯವರಿಗೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಜಲಸಾರಿಗೆ ಇಲಾಖೆ (ಸೇವೆಗಳು-ಎ) /
11. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
12. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
13. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.